# ಮುಕ್ತ ಮಾತಿನ ಫ್ರ್ಯಾಂಕ್

■ ಪ್ರವೀಣ ಕುಲಕರ್ಣಿ



ಈ ಶತಮಾನದ ಮಾನವ ಹಕ್ಕುಗಳ ಹೋರಾಟಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ತಮ್ಮ ಅಸ್ಮಿತೆಗಾಗಿ ನಡೆಸಿದ ಹೋರಾಟ ಬಲು ದೊಡ್ಡದು. ಲಿಂಗತ್ವ ಅಲ್ಪಸಂಖ್ಯಾತರನ್ನೂ ಸ್ವೀಕರಿಸುವ ಮನೋಭಾವ ಸಮಾಜದಲ್ಲಿ ಬೆಳೆಯುವಲ್ಲಿ ಈ ಹೋರಾಟ ಬೀರಿದ ಪ್ರಭಾವ ದೊಡ್ಡದಿದೆ. ಆಫ್ರಿಕಾ ಖಂಡದಲ್ಲಿ ಹೀಗೆ ಲಿಂಗತ್ವ ಅಲ್ಪಸಂಖ್ಯಾತರ ಪರ ಧ್ವನಿ ಎತ್ತಿದವರಲ್ಲಿ ಉಗಾಂಡಾದ ಫ್ರ್ಯಾಂಕ್ ಮುಗಿಷಾ ಪ್ರಮುಖರು.

ಫ್ರ್ಯಾಂಕ್ ಪಾಲಿಗೆ ಕಳೆದ ಎರಡು ದಶಕದ ಅವಧಿ ಸಾವು–ಬದುಕಿನ ಹೋರಾಟವೇ ಆಗಿದೆ. ಅವರಿಗೆ ಬಂದ ಜೀವ ಬೆದರಿಕೆಗಳಿಗೆ ಲೆಕ್ಕವಿಲ್ಲ. ಸ್ನೇಹಿತ ಡೇವಿಡ್ ಕಾಟೊ ಅವರನ್ನು ಮೂಲಭೂತವಾದಿಗಳು ಕೊಂದು ಹಾಕಿದರೂ ಫ್ರ್ಯಾಂಕ್ ಧೃತಿಗೆಡಲಿಲ್ಲ. ರಾಜಕಾರಣಿಗಳು, ಧಾರ್ಮಿಕ ಮುಖಂಡರು ಸಲಿಂಗ ಕಾಮದ ವಿರುದ್ಧ ಬಹುದೊಡ್ಡ ಆಂದೋಲನವನ್ನೇ ಉಗಾಂಡಾದಲ್ಲಿ ನಡೆಸಿದರು. ಸಲಿಂಗಕಾಮದಲ್ಲಿ ತೊಡಗಿದವರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸುವಂತಹ ಶಾಸನವನ್ನು ತರುವಂತೆ ಪ್ರಬಲ ಒತ್ತಾಯಗಳೂ ಕೇಳಿಬಂದವು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಫ್ರ್ಯಾಂಕ್ ಹಲ್ಲೆಗೂ ಒಳಗಾದರು. ಈ ಮಧ್ಯೆ, ಲಿಂಗತ್ವ ಅಲ್ಪಸಂಖ್ಯಾತ ಎಂದು ಗುರುತಿಸಿಕೊಳ್ಳುವುದನ್ನು ಅಪರಾಧ ಎಂದು ಘೋಷಿಸುವ ಮಸೂದೆಯನ್ನು ಉಗಾಂಡಾದ ಸಂಸತ್ತು ಅಂಗೀಕರಿಸಿದೆ. ಈ ಮಸೂದೆಗೆ ರಾಷ್ಟ್ರಾಧ್ಯಕ್ಷರ ಅಂಕಿತ ಬೀಳದಿರಲಿ ಎಂದು ಈ ಸಮುದಾಯ ಹಾರೈಸುತ್ತಿದೆ.

‘ಲಿಂಗತ್ವ ಅಲ್ಪಸಂಖ್ಯಾತರ ಪಾಲಿಗೆ ಆಫ್ರಿಕಾ, ಅದರಲ್ಲೂ ಉಗಾಂಡಾ, ಕಗ್ಗತ್ತಲು ಖಂಡವೇ. ನಮ್ಮನ್ನು ಮನುಷ್ಯರಂತೆ ಕಾಣಲು ಇಲ್ಲಿನ ಜನ ಸಿದ್ಧರಿಲ್ಲ. ನಾನೊಂದು ವೇಳೆ ಒಂಬತ್ತು ವರ್ಷದವನೋ ಹದಿನಾಲ್ಕು ವರ್ಷದವನೋ ಆಗಿದ್ದರೆ ನಾನೊಬ್ಬ ಸಲಿಂಗಕಾಮಿ ಎಂದು ಹೇಳುವ ಧೈರ್ಯವನ್ನೇ ಮಾಡುತ್ತಿರಲಿಲ್ಲ’ ಎಂದು ನೋವಿನಿಂದ ಹೇಳುತ್ತಾರೆ ಫ್ರ್ಯಾಂಕ್.

ಉಗಾಂಡಾ ಸಂಸತ್ತು ಅಂಗೀಕರಿಸಿದ ಹೊಸ ಮಸೂದೆಗೆ ರಾಷ್ಟ್ರಾಧ್ಯಕ್ಷರಿಂದ ಒಂದು ವೇಳೆ ಅಂಕಿತ ಬಿದ್ದರೆ ಫ್ರ್ಯಾಂಕ್ ಜೈಲು ಪಾಲಾಗುವುದು ಖಂಡಿತ. ಏಕೆಂದರೆ, ಕಳೆದ ಇಪ್ಪತ್ತು ವರ್ಷಗಳಿಂದ ಅವರು ಲಿಂಗತ್ವ ಅಲ್ಪಸಂಖ್ಯಾತರಾಗಿ ಗುರುತಿಸಿಕೊಂಡು ಬಂದಿದ್ದಾರೆ. ಸಂಸತ್ತು ಮಸೂದೆಯನ್ನು ಅಂಗೀಕರಿಸುತ್ತಿದ್ದಂತೆಯೇ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಸಾವಿರಾರು ಮಂದಿ ದೇಶ ತೊರೆದು ಹೊರಟಿದ್ದಾರೆ. ಸುರಕ್ಷಿತ ಜಾಗವನ್ನು ಸೇರುವ ಧಾವಂತದಲ್ಲಿ ಅವರಿದ್ದಾರೆ. ಆದರೆ, ಜೈಲು ಪಾಲಾಗುವ ಯಾವ ಭೀತಿಯೂ ಫ್ರ್ಯಾಂಕ್ ಅವರನ್ನು ಕಾಡುತ್ತಿಲ್ಲ. ‘ಮಸೂದೆಯನ್ನು ಹಿಂಪಡೆಯುವಂತೆ ನಾವು ಹೋರಾಟ ನಡೆಸಬೇಕಿದೆ. ನನಗೆ ಗೊತ್ತು, ನಮ್ಮ ಮುಂದಿರುವ ಹಾದಿ ಸುಲಭವಿಲ್ಲ. ಆದರೆ, ನನ್ನ ಮುಂದೆ ಬೇರೆ ಆಯ್ಕೆಯೇ ಇಲ್ಲ. ನನ್ನ ಜನರ ಪರವಾಗಿ ಧ್ವನಿ ಎತ್ತುವುದೇ ಮೊದಲ ಆದ್ಯತೆ’ ಎಂದವರು ಹೇಳುತ್ತಾರೆ.

ಕ್ಯಾಥೊಲಿಕ್ ಧರ್ಮವನ್ನು ಅನುಸರಿಸುವ ಫ್ರ್ಯಾಂಕ್, ಸದಾ ಬಿಳಿ ಅಂಗಿಯ ಮೇಲೆ ನೀಲಿಬಣ್ಣದ ಕೋಟನ್ನು ಧರಿಸುತ್ತಾರೆ. ಎಲ್‌ಜಿಬಿಟಿಕ್ಯು ಸಮುದಾಯದ ಹೆಮ್ಮೆಯ ಪ್ರತೀಕವಾಗಿ ದೇಶದಾದ್ಯಂತ ಓಡಾಡುತ್ತಾರೆ. ಲಿಂಗತ್ವ ಅಲ್ಪಸಂಖ್ಯಾತರನ್ನು ಒಗ್ಗೂಡಿಸುವ ಕೆಲಸವನ್ನೂ ಅವರು ಮಾಡುತ್ತಿದ್ದಾರೆ. ಈ ಸಮುದಾಯದ ಧ್ವನಿ ಹತ್ತಿಕ್ಕುವ ಎಲ್ಲ ಪ್ರಯತ್ನಗಳನ್ನೂ ಅವರು ಮಾಡುತ್ತಿದ್ದಾರೆ.

‘ನನ್ನ ಬಾಲ್ಯ ಎಲ್ಲರಂತೆಯೇ ಸಾಮಾನ್ಯವಾಗಿತ್ತು. ಎಲ್ಲ ಮಕ್ಕಳಂತೆಯೇ ಶಾಲೆಗೆ ಹೋಗುತ್ತಿದ್ದೆ. ಫುಟ್‌ಬಾಲ್ ಆಡುತ್ತಿದ್ದೆ. ಆದರೆ, ನಾನೊಬ್ಬ ಸಲಿಂಗಕಾಮಿ ಎನ್ನುವುದು ಶಾಲಾ ದಿನಗಳಲ್ಲೇ ಗೊತ್ತಾಯಿತು. ನನ್ನ ಹದಿನಾಲ್ಕನೇ ವರ್ಷದವರೆಗೆ ನಾನು ಅದನ್ನು ಮುಚ್ಚಿಟ್ಟುಕೊಂಡಿದ್ದೆ’ ಎಂದು ಫ್ರ್ಯಾಂಕ್ ಹೇಳುತ್ತಾರೆ. ಸಮಾಜದಲ್ಲಿ ಅವರು ಎದುರಿಸಿದ ಹಿಂಸೆ ಅವರನ್ನು ಹೋರಾಟದಲ್ಲಿ ಮತ್ತಷ್ಟು ಗಟ್ಟಿಗರನ್ನಾಗಿ ಮಾಡಿತು. ತಮ್ಮಂತೆ ಹಿಂಸೆ ಅನುಭವಿಸುತ್ತಿದ್ದವರನ್ನು ತೊಂದರೆ ಅನುಭವಿಸದಂತೆ ರಕ್ಷಿಸಲು ಉಗಾಂಡಾದ ಲಿಂಗತ್ವ ಅಲ್ಪಸಂಖ್ಯಾತರ (SMUG) ಸಂಘಟನೆ ಕಟ್ಟಿದರು. ಜಗತ್ತಿನ ವಿವಿಧೆಡೆ ಇದೇ ಕಾರಣಕ್ಕಾಗಿ ಶ್ರಮಿಸುತ್ತಿದ್ದ ಸಂಘಟನೆಗಳೊಂದಿಗೆ ಸಂಪರ್ಕವನ್ನೂ ಬೆಸೆದರು.

ಬ್ರಿಟಿಷ್ ವಸಾಹತುಶಾಹಿ ಅವಧಿಯಲ್ಲಿ ಸಲಿಂಗಕಾಮವನ್ನು ಅಪರಾಧವೆಂದು ಪರಿಗಣಿಸಲಾಗಿತ್ತು. ‘ಆಗಿನ ಕಾಲದಿಂದಲೂ ನಮ್ಮ ಹಕ್ಕುಗಳನ್ನು ಹತ್ತಿಕ್ಕುತ್ತಲೇ ಬರಲಾಗಿದೆ. ಈ ದಬ್ಬಾಳಿಕೆ ಮನೋಭಾವವನ್ನು ನಾವು ವಿರೋಧಿಸುತ್ತಲೇ ಬಂದಿದ್ದೇವೆ. 2011ರಲ್ಲಿ ನನ್ನ ಸ್ನೇಹಿತ ಕಾಟೊನ ಚಿತ್ರವನ್ನು ಕೆಲ ಪತ್ರಿಕೆಗಳು ಪ್ರಕಟಿಸಿದವು. ಸಲಿಂಗಕಾಮದ ಪರವಾಗಿ ಮಾತನಾಡುವ ವ್ಯಕ್ತಿ ಎಂದೂ ಪ್ರಕಟಿಸಿದವು. ಆತನನ್ನು ಗಲ್ಲಿಗೇರಿಸಿ ಹತ್ಯೆ ಮಾಡಲಾಯಿತು. ಆದರೆ, ನಾನೇನೂ ಎದೆಗುಂದಿಲ್ಲ’ ಎನ್ನುತ್ತಾರೆ ಫ್ರ್ಯಾಂಕ್.

ಸರ್ಕಾರಿ ಪ್ರಾಯೋಜಿತ ಶಿಕ್ಷೆಯು ಮನೆ ಬಾಗಿಲಿಗೇ ಬಂದು ನಿಂತಾಗ ಎದೆಗುಂದದೆ ನಿಂತ ಈ ನಾಯಕ ಈಗ ಆಫ್ರಿಕನ್ನರ ಲಿಂಗತ್ವ ಅಲ್ಪಸಂಖ್ಯಾತರ ಪಾಲಿಗೆ ಕಣ್ಮಣಿ.

ಫ್ರ್ಯಾಂಕ್ ಅವರ ತಂದೆತಾಯಿಗಳು ಧರ್ಮಪ್ರಚಾರಕರಾಗಿದ್ದರು. ಮಗ ಈಗ ಮಾನವ ಹಕ್ಕುಗಳ ಪರವಾಗಿ ಹೋರಾಡುತ್ತಿರುವವರ ಗುರುವಾಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65